# ಮಗ್ಗದ ಸಾಹೇಬ

**ಲೇಖಕರ ಪರಿಚಯ:–**

**ಲೇಖಕರು:** ಬಾಗಲೋಡಿ ದೇವರಾಯ

**ಜನನ:** ೧೯೨೭

**ಜನ್ಮ ಸ್ಥಳ:** ಬಾಗಲೋಡಿ, ದಕ್ಷಿಣ ಕನ್ನಡ ಜಿಲ್ಲೆ

**ಕಥಾ ಸಂಗ್ರಹಗಳು:** ೧. ಆರಾಧನಾ

೨. ಹುಚ್ಚು ಮುನಸೀಫ ಮತ್ತು ಇತರ ಕತೆಗಳು

೩. ರುದ್ರಪ್ಪನರೌದ್ರ ಮತ್ತು ಇತರ ಕಥೆಗಳು

**ನಿಧನ:** ೧೯೫೮

**ಆಯ್ಕೆ: "ಬಾಗಲೋಡಿ ದೇವರಾಯ ಅವರ ಸಮಗ್ರ ಕತೆಗಳು"** ಎಂಬ ಕಥಾ ಸಂಕಲನ

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

**೧. ರಹೀಮನು ಮಗ್ಗವನ್ನು ಮುಟ್ಟದೆ ಎಷ್ಟು ವರ್ಷಗಳಾಗಿದ್ದವು?**

ಉ) ರಹೀಮ್ ಮಗ್ಗ ಮುಟ್ಟದೇ ಇಪ್ಪತ್ತಕ್ಕೂ(೨೦) ಹೆಚ್ಚು ವರ್ಷಗಳಾಗಿದ್ದವು.

**೨. ಹುಸೇನ್ ಸಾಹೀಬರ ಮನೆತನದವರಿಗೆ ದೇವಾಲದಲ್ಲಿದ್ದ ಹಕ್ಕು ಯಾವುದು?**

ಉ) ಹುಸೇನ್ ಸಾಹೀಬರ ಮನೆತನದವರಿಗೆ ದೇವಾಲದಲ್ಲಿದ್ದ ಹಕ್ಕು ರಥೋತ್ಸವದ ಸಮಯದಲ್ಲಿ ಮನೆತನದ ಹಿರಿಯ ಪ್ರತಿನಿಧಿಗೆ ಎಲ್ಲರಿಗಿಂತಲೂ ಮುಂದಾಗಿ ಪ್ರಸಾದವನ್ನು ಪಡೆಯುವುದು.

**೩. ಅಬ್ದುಲ್ ರಹೀಮನ ಹಠವೇನು?**

ಉ) ಅಬ್ದುಲ್‌ನಿಗೆ ಒಂದೇ ಹಠ– ಅವನ ಮೂವರು ಮಕ್ಕಳಿಗೆ ಒಂದಿಷ್ಟಾದರೂ ವಿದ್ಯಾಭ್ಯಾಸ ಕೊಡಿಸಿ ಸರಕಾರಿ ನೌಕರರನ್ನಾಗಿ ಮಾಡುವುದು.

**೪. ತಂದೆಯ ಆಸೆಯನ್ನು ಮೊದಲೆರಡು ಮಕ್ಕಳು ನೆರವೇರಿಸಿದ ಬಗೆ ಹೇಗೆ?**

ಉ) ತಂದೆಯ ಆಸೆಯಂತೆ ಮೊದಲೆರಡು ಮಕ್ಕಳು ವಿದ್ಯಾಭ್ಯಾಸ ಮುಗಿಸಿ ಒಬ್ಬ ಸರಕಾರಿ ಕಚೇರಿಯಲ್ಲಿ ಗುಮಾಸ್ತನಾದ ಇನ್ನೊಬ್ಬ ಪೋಸ್ಟ್ ಮಾಸ್ತರನಾದ.

**೫. ರಹೀಮ ಮಗನನ್ನು ಶಾಲೆಯಿಂದ ಬಿಡಿಸಿದ್ದೇಕೆ?**

ಉ) ರಹೀಮನ ಮೂರನೆ ಮಗ ಕರೀಮನು ಮಗ್ಗದ ವಿಷಯದಲ್ಲಿ ಹೆಚ್ಚು ಆಸಕ್ತಿ ತೋರಿದ್ದರಿಂದ ಆತನನ್ನು ಶಾಲೆಯಿಂದ ಬಿಸಿದನು.

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ೨–೩ ವಾಕ್ಯಗಳಲ್ಲಿ ಉತ್ತರಿಸಿ.**

**೧. ಹುಸೇನ್ ಸಾಹೇಬರ ವ್ಯಕ್ತಿತ್ವವನ್ನು ವಿವರಿಸಿ.**

ಉ) ಹುಸೇನ್ ಸಾಹೇಬರು ಧನವಂತ ಹಾಗೂ ಜನಪ್ರಿಯ ವ್ಯಕ್ತಿಯಾಗಿದ್ದರು. ಇವರು ಮಸೀದಿ– ಮಂದಿರಗಳನ್ನು ಕಟ್ಟಿಸಿದ್ದರು. ಸಾಹೀಬ್ ಬಹದ್ದೂರ್ ಎಂಬ ಬಿರುದನ್ನು ಕೂಡ ಪಡೆದಿದ್ದರು.

**೨. ಲೇಖಕರ ಹುಟ್ಟೂರಿನಲ್ಲಿದ್ದ ಮುಸ್ಲಿಂ ಧಾರ್ಮಿಕ ಉತ್ಸವದ ಸಂಪ್ರದಾಯವೇನು?**

ಉ) ಲೇಖಕರ ಹುಟ್ಟೂರಾದ ಬಾಗಲೋಡಿಯ ಪಕ್ಕದಲ್ಲಿ ಮುಸಲ್ಮಾನರ ವಸತಿ ಇತ್ತು. ಅಲ್ಲಿಯ ಒಂದು ಪವಿತ್ರ ಸ್ಥಾನದಲ್ಲಿ 'ಉರ್ಸ್' ಎಂಬ ಮುಸಲ್ಮಾನರ ಧಾರ್ಮಿಕ ಉತ್ಸವದ ಕಾಲದಲ್ಲಿ ಲೇಖಕರ ಮನೆತನದ ಒಬ್ಬ ಪ್ರತಿನಿಧಿ ಇದ್ದೇ ಇರಬೇಕೆಂಬ ಸಂಪ್ರದಾಯವಿತ್ತು.

**೩. ಮಿಠಾಯಿ ಕೊಟ್ಟಿದ್ದಕ್ಕೆ ಅತಿಥಿಗಳ ಆಕ್ಷೇಪವೇನು?**

ಉ) ಹಿಂದೂ ಹಬ್ಬಗಳ ಮಾರನೆಯ ದಿನ ಮುಸ್ಲಿಮ್ ಸಮಾಜದ ಪ್ರತಿಷ್ಠಿತ ಮುಖ್ಯಸ್ಥರು ಲೇಖಕರ ಮನೆಗೆ ಬಂದು ಕುಶಲೋಪಚಾರ ಮಾತನಾಡಿ ಹಬ್ಬದ ನಿಮಿತ್ತ ಮಾಡಿದ್ದ ಸಿಹಿ ಅಂದರೆ ಮೋಕದ, ಉಂಡೆ, ಚಕ್ಕುಲಿ ಇತ್ಯಾದಿಗಳನ್ನು ತೆಗೆದುಕೊಂಡು ಹೋಗುತ್ತಿದ್ದರು. ಆದರೆ ಒಂದು ಬಾರಿ ಲೇಖಕರ ತಾಯಿ ಕಾಯಿಲೆ ಬಿದ್ದ ಕಾರಣ ಅವರ ತಂದೆ ಮಿಠಾಯಿ ಅಂಗಡಿಯಿಂದ ಲಡ್ಡುಗಳನ್ನು ಖರೀದಿ ಮಾಡಿಕೊಟ್ಟಿದ್ದರು ಹೀಗಾಗಿ ಮುಸ್ಲಿಮ್ ಸಮಾಜದ ಮುಖ್ಯಸ್ಥರು ಆಕ್ಷೇಪ ವ್ಯಕ್ತಪಡಿಸಿದರು.

**೪. ಕರೀಮನಿಗೆ ಶಾಲೆಯಲ್ಲಿ ಮಗ್ಗ ಕಲಿತುದರಿಂದ ಆದ ಪ್ರಯೋಜನವೇನು?**

ಉ) ನವೀನ ಶಿಕ್ಷಣದ ಸಹಾಯದಿಂದ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಔದ್ಯೋಗಿಕ ಶಿಕ್ಷಣವನ್ನು ಕೊಡಲು ಪ್ರಾರಂಭಿಸಿದರು. ಇದರಿಂದ ಕರೀಮ್ ಮಗ್ಗದ ಕೆಲಸವನ್ನು ಕಲಿತನು. ಹೀಗಾಗಿ ಸ್ವಂತ ಉದ್ಯೋಗವನ್ನು ಆರಂಭಿಸಿ ಧನವಂತನೂ ಆದನು. ಇದರಿಂದ ದೇಶದ ಗೌರವಯುತ ಪ್ರಶಸ್ತಿಗಳಲ್ಲಿ ಒಂದಾದ ಪದ್ಮ ಭೂಷಣ ಪ್ರಶಸ್ತಿ ಪಡೆಯಲು ಪ್ರಯೋಜನವಾಯಿತು.

**೫. ಶಾಲಾ ವಾರ್ಷಿಕೋತ್ಸವದಂದು ಕರೀಮ ಮಾಡಿದ ಕೆಲಸವೇನು?**

ಉ) ಒಂದು ದಿನ ಶಾಲೆಯ ವಾರ್ಷಿಕೋತ್ಸವ ಸಮಾರೋಪದಲ್ಲಿ ಹಳೆಯ ವಿದ್ಯಾರ್ಥಿಗಳ ಒಂದು ನಾಟಕವಿತ್ತು. ಅದರಲ್ಲಿ ಕರೀಮ್ ಸ್ತ್ರೀ ಪಾತ್ರ ನಿರ್ವಹಿಸಿದನು. ಅದಕ್ಕಾಗಿ ತಾಯಿಯ ಹತ್ತಿರ ಹೋಗಿ ಗೌಪ್ಯವಾಗಿ ಹಳೆಕಾಲದ ಚಿನ್ನದ ಸರವನ್ನು ಅಲಂಕಾರಕ್ಕೆಂದು ಸಾಲವಾಗಿ ತೆಗೆದುಕೊಂಡಿದ್ದನು. ನಾಟಕ ಮುಗಿದ ಮೇಲೆ ಮನೆಗೆ ಬರದೇ ಎಲ್ಲೋ ಮಾಯವಾಗಿ ಹೋದ.

**ಇ. ಕೊಟ್ಟಿರುವ ಪ್ರಶ್ನೆಗಳಿಗೆ ೪–೫ ವಾಕ್ಯಗಳಲ್ಲಿ ಉತ್ತರಿಸಿ.**

**೧. ನವೀನ ಶಿಕ್ಷಣದ ವೈಶಿಷ್ಟ್ಯವೇನು?**

ಉ) ಮಹಾತ್ಮಾಗಾಂಧಿ ಪ್ರೇರಣೆಯಿಂದ ಕೆಲವು ಶಾಲೆಗಳಲ್ಲಿ **'ನವೀನ ಶಿಕ್ಷಣ'** ಆರಂಭವಾಯಿತು.

**ವೈಶಿಷ್ಟ್ಯಗಳು:–**

– ವಿದ್ಯಾರ್ಥಿಗಳಿಗೆ ಹಲವು ತರಹದ ಔದ್ಯೋಗಿಕ ಶಿಕ್ಷಣವನ್ನು ಕೊಡುವುದು.

– ವಿದ್ಯಾರ್ಥಿಗಳಲ್ಲಿ ಹಸ್ತ ಕೌಶಲವನ್ನು, ದೇಹಶ್ರಮದಲ್ಲಿ ಗೌರವ– ಭಾವವನ್ನುಂಟು ಮಾಡುವುದು.

– ಕೆಲವರಿಗೆ ಬಡಗಿಯ ಕೆಲಸ, ಕೆಲವರಿಗೆ ಬೆತ್ತದಕುರ್ಚಿ ಕೆಲಸ, ಕೆಲವರಿಗೆ ಕೃಷಿ ಕೆಲಸ ಹಾಗೂ ಕೆಲವರಿಗೆ ಮಗ್ಗದ ಕೆಲಸವನ್ನು ಕಲಿಸುವುದು.

**೨. ಶಂಕರಪ್ಪ ಅವರು ರಹೀಮನ ಬಳಿಗೆ ಸಂಧಾನಕ್ಕಾಗಿ ಬಂದ ಪ್ರಸಂಗವನ್ನು ತಿಳಿಸಿ.**

ಉ) ಕರೀಮ್ ತಂದೆ ತಾಯಿಯನ್ನು ಭೇಟಿಯಾಗಲು ಬಂದಾಗ ರಹೀಮ್ ಮಗನ ಮುಖವನ್ನು ನೋಡದೆ ಬಾಗಿಲು ಹಾಕಿದನು. ನಂತರ ಕರೀಮ್ ಶಂಕರಪ್ಪನವರ ಹತ್ತಿರ ಹೋಗಿ ಸಂಧಾನ ಮಾಡಿಸುವಂತೆ ವಿನಂತಿಸಿಕೊಂಡಾಗ, ಶಂಕರಪ್ಪನವರು ರಹೀಮ್‌ನ ಹತ್ತಿರ ಬಂದು ಒಂದು ಗಂಟೆಯ ಕಾಲ ಗೋಗರೆದರೂ, ನಿವೇದಿಸಿದರೂ, ತರ್ಕಿಸಿದರೂ, ಚರ್ಚಿಸಿದರೂ, ಪ್ರಯೋಜನವಾಗಲಿಲ್ಲ. ಮುದುಕನಾದ ರಹೀಮ್‌ನಿಗೆ ಕರೀಮ್‌ನ ಬಗ್ಗೆ ಒಂದು ಪದವನ್ನು

ಕೇಳುವ ತಾಳ್ಮೆ ಇರಲಿಲ್ಲ. 'ಸಾಹೇಬ್ ಬಹಾದ್ದೂರ್ ಹುಸೇನ್ ಸಾಹೇಬರ ಕೀರ್ತಿಗೆ ಮಸಿಹಚ್ಚಿದ್ದಾನೆ. ಈ ಮಾತಿನಲ್ಲಿ ನೀವು ಅಡ್ಡ ಬಾಯಿ ಹಾಕಬೇಡಿ, ನೀವು ಕಲಿಸಿದ ಪಾಠದಿಂದಲೇ ಈ ಹಠಮಾರಿ ನಮ್ಮ ವಂಶದ ಕೀರ್ತಿಯನ್ನು ಮಣ್ಣುಪಾಲು ಮಾಡಿದ. ಎಂದು ಬಾಯಿಗೆ ಬಂದಂತೆ ಮಾತನಾಡಿದಾಗ, ಆಗ ಶಂಕರಪ್ಪ ಮುಖಬಾಡಿಸಿಕೊಂಡು ಹಿಂತೆರಳಿದರು.

**ಈ. ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

**೧. ಕರೀಮ ಧನವಂತನಾದ ಬಗೆ ಹೇಗೆ? ವಿವರಿಸಿ.**

ಉ) ಕರೀಮ್‌ನು ಮಹಾತ್ಮಾಗಾಂಧಿ ಪ್ರೇರಣೆಯಿಂದ ಪರಿಚಯಿಸಲ್ಪಟ್ಟ 'ನವೀನ ಶಿಕ್ಷಣ'ದಡಿಯಲ್ಲಿ ಮಗ್ಗದ ಬಗ್ಗೆ ತಿಳಿದುಕೊಂಡನು. ಶಾಲೆಯಲ್ಲಿದ್ದಾಗಲೇ ಮಗ್ಗದಲ್ಲಿ ಒಂದು ಪರಿವರ್ತನೆಯನ್ನು ತನ್ನದೇ ಬುದ್ಧಿವಂತಿಕೆ ಹಾಗೂ ಕೌಶಲದಿಂದ ತಂದು ಶಂಕರಪ್ಪ ಮತ್ತು ಸರಕಾರದಿಂದ ಬೆಳ್ಳಿ ಪದಕವನ್ನು, ನೂರು ರೂಪಾಯಿ ನಗದು ಬಹುಮಾನವನ್ನು ಪಡೆದುಕೊಂಡನು. ತಂದೆಯ ಸಿಟ್ಟಿನ ನಡುವೆಯೂ ಧೈರ್ಯಗೆಡದೆ ಮಗ್ಗದ ಬಗ್ಗೆ ಒಲವನ್ನು ತೋರಿಸ ತೊಡಗಿದನು. ಮಗ್ಗದ ಸಹಕಾರಿ ಸಂಘದ ಸ್ಥಾಪನೆಗೆ ತಾಯಿಯ ಸರವನ್ನು ಕಳುವು ಮಾಡಿ, ಬೇಕಾದ ಹಣವನ್ನು ಪಡೆದು ಸಂಘವನ್ನು ಸ್ಥಾಪಿಸಿ ಅದರ ಅಧ್ಯಕ್ಷನಾದನು. ಅದೂ ಅಲ್ಲದೆ ಮಗ್ಗದ ಯಂತ್ರದ ಪ್ರಯೋಗದಲ್ಲಿ ಹೊಸ-ಹೊಸ ಸುಧಾರಣೆಗಳನ್ನು, ಪರಿವರ್ತನೆಗಳನ್ನು ತಂದು ಹೆಸರು ಮಾಡಿದನು ಮತ್ತು ಧನವಂತನಾದನು. ರಾಷ್ಟ್ರಪತಿಯವರಿಂದ ಪದ್ಮಭೂಷಣ ಪ್ರಶಸ್ತಿಯನ್ನು ಪಡೆದನು.

**೨. ರಹೀಮನಿಗೆ ಮಗ್ಗದ ಬಗ್ಗೆ ದ್ವೇಷ ಉಂಟಾಗಲು ಕಾರಣವೇನು?**

ಉ) ರಹೀಮನ ಪೂರ್ವಜರು ಅಂದರೆ ತಾತ, ತಂದೆ ಎಲ್ಲರೂ ಮಗ್ಗದ ಕೆಲಸದಲ್ಲಿಯೇ ತೊಡಗಿಕೊಂಡವರಾಗಿದ್ದರು. ಆದರೆ ಅವನ ಅಜ್ಜನ ಕಾಲದಲ್ಲಿ ಬ್ರಿಟಿಷರು ಅಗ್ಗದ ವಿಲಾಯಿತೀ ಮಿಲ್ಲಿನ ಬಟ್ಟೆಗಳನ್ನು ನಮ್ಮ ದೇಶದಲ್ಲಿ ಹೇರಿ ಬಿಟ್ಟರು.ಅವು ಬಹಳ ನಿಕೃಷ್ಟ ವಸ್ತುಗಳಾಗಿದ್ದವು, ಬಣ್ಣವೂ ಒಂದೇ ತಿಂಗಳಲ್ಲಿ ಬೇರೆ ಬಣ್ಣಕ್ಕೆ ತಿರುಗುವಂತಿದ್ದವು ಹಾಗೂ ಎರಡೇ ತಿಂಗಳಲ್ಲಿ ಮಾಯವಾಗುವಂತಿದ್ದವು. ಆದರೆ ಬಹು ಅಗ್ಗದ ಬಟ್ಟೆಗಳು. ಹೀಗಾಗಿ ಮಗ್ಗದವರು ಭಿಕಾರಿಗಳಾದರು, ಅವರ ಅನ್ನಕ್ಕೆ ಸಂಚಕಾರವಾಯಿತು. ಹೀಗಾಗಿ ರಹೀಮನಿಗೆ ಆತನ ಹಿರಿಯರು ಕಟ್ಟಿದ ಭವ್ಯವಾದ ಹಳೆಯ ಕಾಲದ ಮನೆ, ವಿಶಾಲವಾದ ತೋಟವಿದ್ದರೂ ಮಗ್ಗಗಳೆಲ್ಲಾ ಧೂಳು ತುಂಬಿ ಜೇಡದ ಬಲೆಗಳಿಂದ ಆಚ್ಛಾದಿತವಾಗಿದ್ದವು. ಈ ಕಾರಣದಿಂದ ರಹೀಮ್ 'ಮಗ್ಗವಲ್ಲ ಕೊರಳಿಗೆ ಹಗ್ಗ' ಎಂದು ಜರಿದು ದ್ವೇಷಿಸಲು ಪ್ರಾರಂಭಿಸಿದನು.

**ಉ. ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.**

**೧. "ಮಗ್ಗವಲ್ಲ ಕೊರಳಿಗೆ ಹಗ್ಗ"**

ಈ ಮೇಲಿನ ಮಾತನ್ನು ಬಾಗಲೋಡಿ ದೇವರಾಯರು ಬರೆದಿರುವ' **'ಮಗ್ಗದ ಸಾಹೇಬ'** ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಆಯ್ಕೆ: "ಬಾಗಲೋಡಿ ದೇವರಾಯ ಅವರ ಸಮಗ್ರ ಕತೆಗಳು"** ಎಂಬ ಕಥಾ ಸಂಕಲನ

**ಸಂದರ್ಭ:-**ರಹೀಮನು ಮಗ್ಗದ ಕುರಿತು ಹೇಳುವ ಸಂದರ್ಭದಲ್ಲಿ ಈ ರೀತಿಯಾಗಿ ಪ್ರತಿಕ್ರಿಯಿಸುತ್ತಿದ್ದನು.

**ಸ್ವಾರಸ್ಯ:-** ಬ್ರಿಟಿಷರ ವಿಲಾಯಿತಿ ಬಟ್ಟೆಗಳು ಮಾರುಕಟ್ಟೆಗೆ ಬಂದಾಗ ಮಗ್ಗದ ವ್ಯಾಪಾರಿಗಳು ಭಿಕಾರಿಗಳಾದರು. ಅದರ ಪರಿಣಾಮವನ್ನು ಎದುರಿಸದವರಲ್ಲಿ ರಹೀಮನು ಒಬ್ಬ ಹೀಗಾಗಿ ರಹೀಮ್ ಮಗ್ಗವನ್ನು ದ್ವೇಷಿಸ ತೊಡಗಿದನು.

**೨. "ಕಳ್ಳನಾದವನು, ಮನೆ ಬಿಟ್ಟು ಓಡಿ ಹೋದವನು ಮಗನೇ ಅಲ್ಲ"**

ಈ ಮೇಲಿನ ಮಾತನ್ನು ಬಾಗಲೋಡಿ ದೇವರಾಯರು ಬರೆದಿರುವ' **'ಮಗ್ಗದ ಸಾಹೇಬ'** ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಆಯ್ಕೆ: "ಬಾಗಲೋಡಿ ದೇವರಾಯ ಅವರ ಸಮಗ್ರ ಕತೆಗಳು"** ಎಂಬ ಕಥಾ ಸಂಕಲನ

**ಸಂದರ್ಭ:-** ಕರೀಮ್‌ನ ತಾಯಿಯ ಸರವನ್ನು ಕದ್ದು ಪರಾರಿಯಾದ ಸಂದರ್ಭದಲ್ಲಿ ರಹೀಮ್ ಈ ರೀತಿಯಾಗಿ ನುಡಿದನು.

**ಸ್ವಾರಸ್ಯ:-** ಕರೀಮನನ್ನು ಮೊದಲೇ ತಾತ್ಸಾರ ಭಾವದಿಂದ ಕಾಣುತ್ತಿದ್ದ ತಂದೆ ರಹೀಮನಿಗೆ ಸರಕದ್ದು ಕೊಂಡು ಹೋದ ವಿಚಾರ ತಿಳಿದಾಗ ಕರೀಮನನ್ನು ಮನೆಗೆ ಸೇರಿಸಬಾರದು ಎಂದು ನಿರ್ಧರಿಸಿ ತನಗೆ ಕೇವಲ ಇಬ್ಬರೇ ಗಂಡು ಮಕ್ಕಳು ಕರೀಮ್ ಮಗನೇ ಅಲ್ಲ ಎಂದು ಶಪಿಸಿದನು.

**೩. "ನಿಮ್ಮ ಹಳೆಯ ಶಿಷ್ಯನಿಗೆ ಇದೊಂದು ಉಪಕಾರ ಮಾಡಿ"**

ಈ ಮೇಲಿನ ಮಾತನ್ನು ಬಾಗಲೋಡಿ ದೇವರಾಯರು ಬರೆದಿರುವ' **'ಮಗ್ಗದ ಸಾಹೇಬ'** ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಆಯ್ಕೆ: "ಬಾಗಲೋಡಿ ದೇವರಾಯ ಅವರ ಸಮಗ್ರ ಕತೆಗಳು"** ಎಂಬ ಕಥಾ ಸಂಕಲನ

**ಸಂದರ್ಭ:-** ಈ ಮಾತನ್ನು ಕರೀಮ್ ಶಂಕರಪ್ಪನವರಿಗೆ ಸಂಧಾನ ಮಾಡಿಸಿ ಎಂದು ಹೇಳುವ ಸಂದರ್ಭದಲ್ಲಿ ವಿನಂತಿಸಿಕೊಂಡನು.

**ಸ್ವಾರಸ್ಯ:-** ರಹೀಮ್‌ನು ಕರೀಮ್‌ನನ್ನು ಮನೆಯೊಳಗೆ ಸೇರಿಸ ದಿದ್ದಾಗ ಹೇಗಾದರೂ ಮಾಡಿ ತಂದೆಯೊಂದಿಗೆ ಸಂಧಾನ ಮಾಡಿ ಎಂದು ವಿನಂತಿಸಿಕೊಳ್ಳುತ್ತಾ ಈ ರೀತಿಯಾಗಿ ಹೇಳುತ್ತಾನೆ.

**೪. "ದೇವರು ದೊಡ್ಡವನು ದೇವರು ದಯಾಳು"**

ಈ ಮೇಲಿನ ಮಾತನ್ನು ಬಾಗಲೋಡಿ ದೇವರಾಯರು ಬರೆದಿರುವ' **'ಮಗ್ಗದ ಸಾಹೇಬ'** ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಆಯ್ಕೆ: "ಬಾಗಲೋಡಿ ದೇವರಾಯ ಅವರ ಸಮಗ್ರ ಕತೆಗಳು"** ಎಂಬ ಕಥಾ ಸಂಕಲನ

**ಸಂದರ್ಭ:-** ಕರೀಮನಿಗೆ ಪದ್ಮಭೂಷಣ ಪ್ರಶಸ್ತಿ ಬಂದಂತಹ ಸಂದರ್ಭದಲ್ಲಿ ವಾರ್ತಾ ಪತ್ರಿಕೆಯ ಮೂಲಕ ತಿಳಿದ ರಹೀಮ್ ಈ ರೀತಿಯಾಗಿ ಹೇಳಿದನು.

**ಸ್ವಾರಸ್ಯ:-** ಕರೀಮನಿಗೆ ದೇಶದ ಅತ್ಯುನ್ನತ ಪ್ರಶಸ್ತಿಗಳಲ್ಲಿ ಒಂದಾದ 'ಪದ್ಮಭೂಷಣ' ಸಿಕ್ಕಾಗ ಆ ವಿಷಯವನ್ನು ವಾರ್ತಾಪತ್ರಿಕೆಯ ಮೂಲಕ ತಿಳಿದ ರಹೀಮ್ ಆ ಪ್ರಶಸ್ತಿಯು ಸಾಹೇಬ್ ಬಹಾದ್ದೂರ್‌ಗಿಂತಲೂ ಮೇಲಾದದ್ದು ಎಂದು ಸಂತೋಷದಿಂದ ಈ ಮಾತನ್ನು ಹೇಳುತ್ತಾನೆ.

**ಊ. ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

೧. ಅಬ್ದುಲ್‌ರಹೀಮನಿಗೆ **ಮಗ್ಗದ ಸಾಹೇಬ** ಎಂದು ಹೇಳಿದರೆ ಬಹು ಸಿಟ್ಟು ಬರುತ್ತಿತ್ತು.

೨. ಮನೆಯಲ್ಲಿ **ಊಟಕ್ಕೆ** ಇದೆಯೋ ಇಲ್ಲವೂ ಎಂಬಂತಾಗಿದೆ.

೩. ಹುಡುಗನ **ಉತ್ಸಾಹಕ್ಕೆ** ಆಕಾಶಕ್ಕೇರಿತು.

೪. ಶಂಕಪ್ಪ ಅವರು **ಮುಖ ಬಾಡಿಸಿಕೊಂಡು** ಹಿಂತೆರಳಿದರು.

೫. ನನಗೆ ಎರಡೇ ಮಕ್ಕಳು **ಕಳ್ಳರ** ಪರಿಚಯ ನನಗಿಲ್ಲ.